ಸೂರ್ಯತೇಜರು ಈ ಹುಡುಗನನ್ನು ಮಾತಿಗೆಳೆದರು.

"ನಿನ್ನ ಹೆಸರೇನು?"

"ಸೂರಿ."

"ಅದೆಂಥ ಹೆಸರು ಸೂರಿ... ಸೂರಿಯೋ ಚೂರಿಯೋ?" ಎಂದರು ನಗುತ್ತ.

"ಸೂರ್ಯನಾರಾಯಣ. ಎಲ್ಲಾ ಸೂರಿ ಅಂತಾನೇ ಕರಿತಾರೆ."

"ನಿನಗೆ ನಾಟಕ ಎಂದರೆ ಇಷ್ಟನಾ?"

"ಹೌದು. ಆದರೆ ನಟನೆ ಬರಲ್ಲ ನಂಗೆ."

"ಹಾಗಾದರೆ ನೀನು ನನ್ನಂತಲ್ಲ ಬಿಡು."

"ಅಂದರೆ?!" ಎಂದ ಆಶ್ಚರ್ಯದ ಭಾವದಿಂದ.

"ಏನಿಲ್ಲ... ನಮ್ಮ ಜೊತೆ ಕೆಲಸ ಮಾಡಲು ನಿನಗೆ ಇಷ್ಟವಿದೆಯಾ?"

"ಹೌದೌದು. ತುಂಬಾ ಇಷ್ಟ ನಾಟಕಗಳನ್ನು ನೋಡಬಹುದು, ನಿಮ್ಮ ಜೊತೆಗೆ ಇರಬಹುದು..." ಆನಂದದಿಂದ ಇನ್ನೂ ಹೇಳುತ್ತಲೇ ಇದ್ದ.

"ಸರಿ. ನಾನಿಲ್ಲಿ ಕೆಲಸ ಕೊಡಿಸುತ್ತೇನೆ. ನಾಳೆಯಿಂದ ಬಾ... ತಿಳಿಯಿತಾ..."

"ಹಾಂ... ಖಂಡಿತ" ಎಂದು ಮುಗ್ಧವಾಗಿ ನಕ್ಕ.

ಅಲ್ಲಿಂದ ಹೊರಟು ಸ್ವಲ್ಪ ದೂರ ಹೋದ ಬಳಿಕ ಕಾಲನ್ನೆತ್ತಿ ಹಾರುತ್ತ ಕುಣಿದಾಡಿ ಬಿಟ್ಟ ಸೂರಿ.

ಇವನ ಮುಗ್ಧತೆಗೆ ಮೆಚ್ಚಿದ ಸೂರ್ಯತೇಜರಿಗೆ ಇಷ್ಟದ ಹುಡುಗನಾಗುತ್ತ ಹೋದ. ಸೂರ್ಯತೇಜರಿಗೆ ಸೂರಿಯನ್ನೂ ನಮ್ಮ ತಂಡಕ್ಕೆ ಸೇರಿಸಿಕೊಳ್ಳುವ ಯೋಚನೆ ಬಂದು ರಂಗಪರಿಕರಗಳ ನಿರ್ವಹಣೆಗೆಂದು ಇವನನ್ನು ಸೇರಿಸಿಕೊಳ್ಳಲು ತಾವೇ ತರಬೇತಿ ಕೇಂದ್ರದ ಮುಖ್ಯಸ್ಥರ ಜೊತೆ ಮಾತಾಡಿ ಕೆಲಸ ದೊರಕಿಸಿಕೊಟ್ಟರು. ಅಂದಿನಿಂದ ಸೂರಿಗೆ ಸೂರ್ಯತೇಜರೆಂದರೆ ಅತೀವ ಪ್ರೀತಿ. ಸೂರ್ಯತೇಜರಿಗೂ ಅಷ್ಟೆ ಸೂರಿಯ ಮೇಲೆ ಮಮತೆ.

★★★

ಸೂರ್ಯತೇಜರನ್ನು ಎಲ್ಲರೂ ಇಷ್ಟಪಡುತ್ತಿದ್ದರು. ಕಾರಣ, ಅವರು ಯಾವಾಗಲೂ ಹಸನ್ಮುಖದಿಂದಲೇ ಇರುತ್ತಿದ್ದರು. ತಮಗೆ ತಿಳಿಯದ್ದನ್ನು ಅತೀ ಕಿರಿಯರಿಂದಲೂ ಆಸಕ್ತಿಯಿಂದ ಅರಿತುಕೊಳ್ಳುತ್ತಿದ್ದರು. ಅಲ್ಲದೆ ತಮಗೆ ತಿಳಿದಿದ್ದನ್ನು ಮುಗ್ಧ ಮಗುವಿಗೆ ಕಲಿಸಿದಂತೆ ಹೇಳಿಕೊಡುವುದು ಅವರ ಹುಟ್ಟುಗುಣ. ಮತ್ತೆ ಅವರ ಲವಲವಿಕೆ ಹಾಗೂ ಜೀವನಪ್ರೀತಿಯನ್ನು ಎಲ್ಲರೂ ನೋಡಿ ಕಲಿಯಬೇಕು. ಎಲ್ಲರಲ್ಲಿಯೂ ಬೆರೆಯುತ್ತ ಸಮಯೋಚಿತ ಹಾಸ್ಯಚಟಾಕಿಗಳಿಂದ ಎಲ್ಲರನ್ನು ನಗಿಸುತ್ತ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದ ಸೂರ್ಯತೇಜರು ಎಲ್ಲರ ಮನ ಸೂರೆಗೊಂಡಿದ್ದರು. ಹದಿನೈದು ವರ್ಷ ಹಲವು ಪಾತ್ರಗಳನ್ನು ನಿರ್ವಹಿಸಿದ ಅನುಭವದಿಂದ ಯಾವುದೇ ಪಾತ್ರವನ್ನು ಲೀಲಾಜಾಲವಾಗಿ ನಟಿಸಿ ಪ್ರೇಕ್ಷಕರನ್ನು ರಂಜಿಸುತ್ತಿದ್ದರು. ಹಾಗಾಗಿ ಸಹನಿರ್ದೇಶನದ ಹೊಣೆ ಇವರ ತಲೆ ಮೇಲೆ ಬಿತ್ತು.

★★★

ಅದೊಂದು ದಿನ ಸೂರಿ ಹೋಟೆಲಿನಲ್ಲಿ ಚಾ ಕುಡಿಯಲು ಹೋಗಿದ್ದ. ಅಲ್ಲಿ ಹಿರಿಯರೊಬ್ಬರು ಸೂರ್ಯತೇಜರ ನಟನೆಯ ಬಗ್ಗೆ ಇವನ ಜೊತೆ ಮಾತನಾಡುತ್ತ, "ವೈಯಕ್ತಿಕವಾಗಿ ಆ ವ್ಯಕ್ತಿ ಸರಿ ಇಲ್ಲ ಅಂತೆ ಅಲ್ಲವಾ? ಹೆಂಡತಿಯನ್ನು ಬಿಟ್ಟು ಬಂದಿದ್ದಾನಂತೆ. ಆ ಮೂಲೆಯಲ್ಲಿನ ಒಂಟಿ ಮನೆಯಲ್ಲಿ ಉಳಿದುಕೊಂಡು ಏನೇನು ಮಾಡುತ್ತಾನೋ ತಿಳಿಯದು ಮಾರಾಯ! ಸ್ವಲ್ಪ ವಿಚಿತ್ರದ ವ್ಯಕ್ತಿ ಅನಿಸುತ್ತದೆ" ಎಂದರು.